Doc-348
T.P-2

51st Year of Publication ★ SATYAVADI Daily, MYSORE 4

Reg No B G 155 5-8-1966

ಪ್ರಮುಖ ನವ ಸಮಾಚಾರಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚೆಂದಾ 40 ಪೈಸೆ
ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮೋತ್ಸಾಹನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮದ್ರಾಸಿನಲ್ಲಿ ಭಾರಿ ಮೆರವಣಿಗೆ

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ತಿತರಗಣ್ಯರು ಅಭಿನಂದಿಸಿ ಶುಭಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಅಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ಸಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವುದ್ದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಅಮರನಾಥ್

ಶ್ರೀನಗರ— ಅಮರನಾಥ ಗುಹೆಯಲ್ಲಿ ಮಂಜಿನಿಂದ ಸ್ವಯಂನಿರ್ಮಿತವಾದ ಲಿಂಗವು ಶುಕ್ರವಾರ 10 ಅಡಿ ಎತ್ತರವಿದ್ದಿತೆಂದು ವರದಿಯಾಗಿದೆ – ಇಂದು ಅಲ್ಲಿ ಪ್ರಾರಂಭವಾಗುವ ಜಾತ್ರೆಯಲ್ಲಿ 1500 ಭಕ್ತರು ಭಾಗವಹಿಸಲಿರುವರು.

★

ಕೆನಡಿ ಸ್ಮಾರಕ

ಲಕ್ನೋ — ನೈನಿತಾಲ್ ಜಿಲ್ಲೆಯಲ್ಲಿ ಮಾಜಿ ಅಮೆರಿಕಾ ಅಧ್ಯಕ್ಷ ಜಾನ್ ಕೆನಡಿ ಬಗ್ಗೆ ಸ್ಮಾರಕವಾಗಿ ಪ್ರವಾಸ ನೆಲೆ ನಿರ್ಮಿಸಲಾಗುವುದು. ಇದಕ್ಕಾಗಿ ಭಕೇವಲಿಯಲ್ಲಿ ನುನ್ನೂರು ಎಕರೆ ಭೂಮಿಯನ್ನು ದಾನ ಮಾಡಿರುವನು. ಸ್ಮಾರಕ ನಿರ್ಮಾಣಕ್ಕೆ ಅಮೆರಿಕಾ ರಾಯಭಾರಿ ಕಚೇರಿ ನೆರವನ್ನು ನೀಡುವುದು. ಕೆನಡಿ ಜೀವಿತ ಮತ್ತು ಕಾರ್ಯಗಳ ಬಗ್ಗೆ ಪ್ರವಾಸಿ ವಿಶ್ರಾಂತಿ ಗೃಹದಲ್ಲಿ ಪುಸ್ತಕ ಭಂಡಾರ ಸ್ಥಾಪನೆ ಆಗುವುದು.

★

ತೆರಿಗೆ ಇಳಿತ

ಕೊಲಂಬೊ — ನಾಲ್ಕು ತರಹ ಜನಪ್ರಿಯ ಬಟ್ಟೆಯ ಮೇಲೆ ಶೇಕಡ 25 ಆ ಮದು ತೆರಿಗೆ ರದ್ದಾಗಿದೆ.

★

ಸೀಮೆಎಣ್ಣೆಯವರಿಗೆ ಎಚ್ಚರಿಕೆ

ಮೈಸೂರು— ಸೀಮೆಎಣ್ಣೆ ವ್ಯಾಪಾರಿಕೆಳು ತಮ್ಮ ದಿನವಹಿ ಲೆಕ್ಕ ಇಡುವ ಬಗ್ಗೆ ಜಿಲ್ಲಾಧಿಕಾರಿಗಳು ಎಚ್ಚರಿಕೆ ಇತ್ತಿರುವರು

★

ಕರಾಳ ಧ್ವಜ ಪ್ರದರ್ಶನ

ಅಹಮದಾಬಾದು— ಉಪ ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯರು ನಿನ್ನೆ ಇಲ್ಲಿಗೆ ಬಂದಾಗ ಬ್ಯಾಂಕು ನೌಕರರು ಕಪ್ಪು ಬಾವುಟ ಪ್ರದರ್ಶಿಸಿದರು.

★

ಭಾವೆಕರ ಆದೇಶ

ಮೋತಿಹರಿ (ಬಿಹಾರ್)— ಕೈಗಾರಿಕೆ ಮತ್ತು ವಾಣಿಜ್ಯೋದಮಿಗಳು ರಾಜಕೀಯ ಪಕ್ಷಗಳಿಗೆ ಹಣ ಕೊಡಬಾರದೆಂದೂ, ಸಾರ್ವಜನಿಕ ಕಲ್ಯಾಣ ಕಾರ್ಯಗಳಿಗೆ ಧನನೆರವು ನೀಡಬೇಕೆಂದೂ ಆಚಾರ್ಯ ಭಾವೆ ತಿಳಿಸಿದರು.

ಎಂ ಪಿ ಸಿ ಸಿ

ಬೀಹರ್— ನಿನ್ನೆ ಇಲ್ಲಿ ಎಂ ಪಿ ಸಿ ಸಿ ಅಧಿವೇಶನವು ಎಂ ಪಿ ಸಿ ಸಿ ಅಧ್ಯಕ್ಷ ಡಾ|| ಆಳ್ವರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರೂ, ಸ್ಟೇಟ್ ಮಂತ್ರಿಗಳೂ, ಹಲವು ಮಂತ್ರಿಗಳೂ ಮತ್ತು ಬಹು ಮಂದಿ ಪ್ರತಿನಿಧಿಗಳು ಆಗಮಿಸಿದ್ದರು. ಗಡಿ ವ್ಯಾಜ್ಯದ ಪಿ ಚಾಂಡಲ್ಲಿ ಅಧಿಕೃತ ಕಾರ್ಯ ಸಮಾನು ಮತದಿಂದ ಅಂಗೀಕೃತವಾಯಿತು. ಮಹಾಜನ ಸಮಿತಿ ಶಿಫಾರಸನ್ನು ಜಾರಿಗೆ ತರುವುದು ಇನ್ನು ತಡಮಾಡಿದರೆ ರಾಜ್ಯಾದ್ಯಂತ ಅಶಾಂತಿ ಹಾಗೂ ಚಳುವಳಿ ಉಂಟಾಗಬಹುದೆಂದು ಕೇಂದ್ರ ಸರ್ಕಾರವನ್ನು ಎಚ್ಚರಿಸಲಾಯಿತು. ಕ್ಷಾಮ ಅಥವಾ ನೆರೆ ಹಾವಳಿ ಸಂತ್ರಸ್ತರಿಗೆ ಸಕಾಲದಲ್ಲಿ ಪರಿಹಾರ ನೀಡಲಿಲ್ಲವೆಂಬ ಅಪಾದನೆಯನ್ನು ಮುಖ್ಯ ಮಂತ್ರಿ ಶ್ರೀ ವೀರೇಂದ್ರರು ನಿರಾಕರಿಸಿದರು. ರಾಜ್ಯದಲ್ಲಿ ಅಭಾವ ಪರಿಹಾರದ ಕಾರ್ಯಕ್ಕೆ ಮತ್ತೆ ರೂ. 50 ಲಕ್ಷ ವನ್ನು ಕೇಂದ್ರ ಸರ್ಕಾರ ನಿಗದಿ ಮಾಡಿರುವುದೆಂದು ಮುಖ್ಯ ಮಂತ್ರಿಗಳು ತಿಳಿಸಿದರು. ಕೇಂದ್ರ ಈ ವರೆಗೆ ರೂ. 125 ಲಕ್ಷ ಮಂಜೂರ್ಮಾಡಿರುವುದಾಗಿಯೂ ಮತ್ತು ಹೆಚ್ಚು ಹಣಕ್ಕೆ ತಾವು ಒತ್ತಾಯ ಮಾಡುತ್ತಿರುವುದಾಗಿಯೂ ಹೇಳಿದರು. 1972 ರಿಂದ ಆಹಾರ ಧಾನ್ಯ ಆಮದನ್ನು ಕೇಂದ್ರ ಸರ್ಕಾರ ನಿಲ್ಲಿಸಲು ನಿರ್ಧರಿಸಿರುವುದಾಗಿ ಕೇಂದ್ರ ಆಹಾರ ರಾಜ್ಯ ಮಂತ್ರಿ ಶ್ರೀ ಎಂ. ಎಸ್. ಗುರುಪಾದ ಸ್ವಾಮಿಯವರು ಹೇಳಿದರು. ಲೆವಿ ಪದ್ಧತಿಯನ್ನು ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಟೀಕಿಸಿ ಇದು ರೈತರಿಗೆ ತುಂಬಾ ಹಿಂಸೆಕರವಾಗಿದೆ ಎಂದೂ ಹೇಳಿ, ಡಾಸ್ತಾನು ಸಂಗ್ರಹಣೆ ಮಳಿಗೆಗಳಲ್ಲಿ 19 ಸಾವಿರ ಕ್ವಿಂಟಾಲು ಜೋಳ ಕೆಟ್ಟಿರುವುದೆಂದು ಆಪಾದಿಸಿದರು. ಪಾನನಿರೋಧ ಜಾರಿಗೆ ತರದಿರುವುದನ್ನು ಟೀಕಿಸಲಾಯಿತು.

★

ಕಳೆದ ಗುರುವಾರ ಯುವಕ ಕಾಂಗ್ರೆಸ್ ಮೆರವಣಿಗೆಕಾರರ ಮೇಲೆ ನಡೆದ ಪೋಲೀಸಕ ದಬ್ಬಾಳಿಕೆ ಪ್ರತಿಭಟಿಸಿ ಮುದರಾಸು ನಗರದಲ್ಲಿ ಭಾರಿ ಮೆಳವಣಿಗೆ ನಡೆಯಿತು. ಮಾಜಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕಾಮರಾಜರ ನೇತೃತ್ವದಲ್ಲಿ ಕಂಕಾಳಲ್ಲಿ ಮುಕ್ಕಳನ್ನು ಎತ್ತಿಕೊಂಡಿದ್ದವರೂ ಸೇರಿ 75 ಸಾವಿರ ಜನಾದಿಧಾರಿಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಮೆರವಣಿಗೆ ನಾಲ್ಕು ಮೈಲಿ ಉದ್ದವಿತ್ತು.

ಕೇರಳದ ಕನ್ನಡ ಶಾಸಕರ ಎಚ್ಚರಿಕೆ

ಕಾಸರಗೋಡು— ರಾಷ್ಟ್ರೀಯ ಭಾವೈಕ್ಯ ಸಮ್ಮೇಳನದ ಶಿಫಾರಸ್ಸನ್ನು ಅನುಸರಿಸಿ ಮಹಾರ್ಜ ಕಮಿಷನ್ ವರದಿಯನ್ನು ವಿನಾಶ ಆಥವಾ ಮಾಡಿದರೆ, ತೀವ್ರವಾಗಿ ವಿರೋಧಿಸಿ ಹೋರಾಡಲಾಗುವದೆಂದು ಕೇರಳದ ಕನ್ನಡಿಗ ಶಾಸಕರಾದ ಶ್ರೀ ಭಂಡಾರಿ ಮತ್ತು ಶ್ರೀ ಕುನಕೆಲಾಯ ಎಚ್ಚರಿಕೆ ನೀಡಿರುವರು.

ಪತ್ರಿಕಾ ಸಮ್ಮೇಳನ

ಮೈಸೂರು ಪೌರಸಭೆ ವಿರೋಧಪಕ್ಷದ ನಾಯಕ ಶ್ರೀ ಎಂ. ಎನ್. ತಿಮ್ಮಯ್ಯನವರು ಕರೆದಿದ್ದ ಪತ್ರಿಕಾ ಸಮ್ಮೇಳನದಲ್ಲಿ ಸರ್ಕಾರ ಕೂಡಲೇ ಪೌರ ಚುನಾವಣೆಗೆ ಆಜ್ಞೆ ಮಾಡದಿದ್ದರೆ ಚಳುವಳಿ ಹೂಡುವುದೆಂದು ತಿಳಿಸಿದರು.

ಬಡ ರೋಗಿಗಳಿಗಾಗಿ

ಮಣಿಪಾಲದ ಜೂನಿಯರ್ ಚೇಂಬರ್ ನವರು ಬಡವರಿಗಾಗಿ ಒಂದು ಔಷಧಿಯ ಬ್ಯಾಂಕು ಸ್ಥಾಪಿಸಲು ಯೋಚಿಸಿರುವರು.

ಸಾಲಗಾರರಲ್ಲಿ ಮನವಿ

ಸರಕಾರ ಅಥವಾ ಸಹಕಾರ ಸಂಘದಿಂದ ಸಾಲ ಪಡೆದಿರುವವರು ವಾಪಸು ಮಾಡಬೇಕೆಂದು, ತನ್ಮೂಲಕ ಇತರರು ಭಾವಿ ತೋಡಿಕೊಳ್ಳಲು, ಹ್ಯವ ಕಾಯಕ ಕಾರ್ಯಕ್ಕೆ ಹಣ ಪಡೆಯಲು ಅನುಕೂಲವಾಗುವದೆಂದು ಅಭಿವೃದ್ಧಿ ಕಮೀಷನರ್ ಶ್ರೀ ಜಿ. ವಿ. ಕೆ. ರಾವ್‌ರವರು ಕುಣಿಗಲ್ ತಾಲ್ಲೂಕ್ ಮಂಡಲಿಯಲ್ಲಿ ತಿಳಿಸಿದರು.

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

★

(ಮುಂದುವರಿದುದು)

ಈಚೆಗೆ ವಿಜ್ಞಾನವು ನಾನಾ ರೀತಿಯ ಸಂಶೋಧನೆಗಳನ್ನು ನಡೆಸಿದೆ. ಹಿಂದುಗಳ ಆಚಾರದ ಬಗ್ಗೆ ವಿಜ್ಞಾನಿಗಳು ತಿರಸ್ಕಾರವಾಗಿ ನೋಡುತ್ತಿದ್ದುದೆಯೇ ಹೊರತು ನಮ್ಮ ಆಚಾರದ ಯಾವುದೇ ಭಾಗವನ್ನಾದರೂ ಪ್ರಯೋಜನವಿಲ್ಲವೆಂದು ಸಾಧಿಸಿ ತೋರಿಸಿಲ್ಲ. ಆದರೆ ಹಿಂದೆ ಹಾಸ್ಯ ಮಾಡುತ್ತಿದ್ದ ಅನೇಕ ಸಂಗತಿಗಳು ಈ ಚೆಗೆ ವೈಜ್ಞಾನಿಕವೆಂದು ವಿಜ್ಞಾನಿಗಳಿಂದಲೇ ಸಾಧಿಸಲ್ಪಟ್ಟಿದೆ. ಉದಾಹರಣೆಗೆ ಪವಿತ್ರ ಗಂಗಾಜಲದಲ್ಲಿ ವಿಷಕ್ರಿಮಿಗಳನ್ನು ಕೊಲ್ಲುವ ಶಕ್ತಿ ಇವೆ, ಬೇವಿನ ಕಡ್ಡಿಯಿಂದ ಹಲ್ಲುಜ್ಜುವುದರಿಂದ ಹಲ್ಲಿಗೆ ಆರೋಗ್ಯ ಉಂಟಾಗುತ್ತದೆ, ತಾಮ್ರದಲ್ಲಿಟ್ಟ ತುವ ನೀರನ್ನು ಕುಡಿಯುವುದರಿಂದ ಅನೇಕ ವ್ಯಾಧಿಗಳು ಪರಿಹಾರ ಹೊಂದುತ್ತವೆ ; ತುಳಸಿಯು ಕ್ಯಾನ್ಸರ್ ಮುಂತಾದ ವ್ಯಾಧಿಗಳಿಗೆ ಒಳ್ಳೆಯದು. ಈ ರೀತಿ ನಮ್ಮ ಆಚಾರಗಳೆಲ್ಲವೂ ವಿಜ್ಞಾನವೇ ಸರಿಯೆಂದು ಒಪ್ಪಿರುವಾಗ, ಅವನ್ನು ಗೊಡ್ಡು ಆಚಾರಗಳೆಂದೂ ಮೂಢ ಸಂಪ್ರದಾಯಗಳೆಂದೂ ತೆಗಳುವುದು ತಿಳುವಳಿಕೆ ಇಲ್ಲದವರ ಕೃತ್ಯವಾಗುತ್ತದೆ

ಪರ್ಣಾಶ್ರಮಧರ್ಮ ವ್ಯವಸ್ಥೆಗೂ ರಾಜಕೀಯಕ್ಕೂ ಯಾವುದೇ ರೀತಿಯ ಸಂಬಂಧವೂ ಇಲ್ಲ. ಪ್ರಜೆಯು ರಾಷ್ಟ್ರಕ್ಕೆ ತನ್ನ ಪಾಲಿನ ಕರ್ತವ್ಯವನ್ನು ಮಾಡಬೇಕೆಂಬ ನಿಯಮವು ಪ್ರತಿಯೊಬ್ಬನಿಗೂ ಇರುತ್ತದೆ. ಗ್ರೀಸ್ ದೇಶದ ಅಲೆಗ್ಜಾಂಡರನೂ, ನಂತರ ಧಂಡೆತ್ತಿ ಬಂದ ಹೂಣರು ಮತ್ತು ಶಕರ ಕಾಲದಲ್ಲಿ ಪರ್ಣಾಶ್ರಮ ವ್ಯವಸ್ಥೆಯಿತ್ತು. ಮುಸಲ್ಮಾನರ ವಿರುದ್ಧ ಪ್ರಬಲ ರಾಜ್ಯಗಳನ್ನು ಕಟ್ಟಿದ ಹರಿಹರ ಮತ್ತು ಛತ್ರಪತಿ ಶಿವಾಜಿ ಕಾಲದಲ್ಲೂ ಪರ್ಣಾಶ್ರಮಧರ್ಮ ವ್ಯವಸ್ಥೆ ಇತ್ತು.

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಅಶೋಕ ಬಿಜಿನೆಸ್

ಲಾಸ್ಟಾಲ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ ನಮ್ಮಲ್ಲಿ ದೊರೆಯುತ್ತವೆ

ವುಡ್‌ಲಾಂಡ್ಸ್ ಅಮೋಘ 6 ನೇ ವಾರ

— ಮನೋಹರ ಈಸ್ಮೆ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸ್ಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಛೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಆಪೇರ— ಜನವರಿಯು 5 ನೇ ವಾರ

ಚಿತ್ರಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವಥ್ ದಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀಮದ್ಭಾರತಿ ಜಗದ್ಗುರು ಮಹಾಸನ್ನಿಧಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಿಗಳವರು ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋರಕ್ಷಣೆ ವಿದ್ಯಾಪೀಠ, ಶಾಖಾಹಾರ, ಪಶುವೈದ್ಯ, ಪಂಚಾರಗಳ ಎಕ್ಕೆಕ ಪ್ರಚಾರ ವಿದ್ಯಾಪೀಠಿಕೆ ; ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣ ವ್ಯವಸ್ಥಾಪಕರು ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಣಿಯಿಂದ ಕಳೆದಿರುವವರು ತಮ್ಮ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ॥ ಪಿ ಎಸ್ ಶಾಂತಮೂರ್ತಿ, ಶ್ರೀ ಪಿ.ಎಸ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ. ಬಿ. ಶಾಸ್ತ್ರಿಗಳು, 1080 ವಿದ್ಯಾರಣ್ಯಪುರ, ಮೈಸೂರು

ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು

ಗೋರಕ್ಷಣ ಪತ್ರಿಕೆ ಸತ್ಯವಾದಿಪೈ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮಾಡಿ, ಪುಣ್ಯಸಂಪಾದನೆ ಅಮೂಲ್ಯಗಳು ಮಿಷ್ಟೆ ಚಚ್ಚಿ ನಡೆಯಿರಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4